# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಸದಸ್ಯರ ಹೆಸರು | : | ಡಾ|| ವೈ.ಎ.ನಾರಾಯಣಸ್ವಾಮಿ (ಶಿಕ್ಷಕರ ಕ್ಷೇತ್ರ), |
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 195 (291) |
| ಉತ್ತರಿಸಬೇಕಾದ ದಿನಾಂಕ | : | 22.09.2020. |
| ಉತ್ತರಿಸಬೇಕಾದವರು | : | ಮಾನ್ಯ ನಗರಾಭಿವೃದ್ಧಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕೋಲಾರ ಜಿಲ್ಲೆಯ ಬಂಗಾರಪೇಟೆ ತಾಲ್ಲೂಕಿನಲ್ಲಿ ಹಾಲಿ ನಿರ್ಮಾಣದ ಹಂತದಲ್ಲಿರುವ ಎರಗೋಳ (ಕುಡಿಯುವ ನೀರು) ಯೋಜನೆ ಪೂರ್ಣಗೊಳ್ಳುವುದು ಯಾವಾಗ: | ಕೋಲಾರ, ಬಂಗಾರಪೇಟೆ ಮತ್ತು ಮಾಲೂರು ಪಟ್ಟಣಗಳಿಗೆ ಹಾಗೂ ಮಾರ್ಗ ಮಧ್ಯದ 45 ಗ್ರಾಮಗಳಿಗೆ ಕುಡಿಯುವ ನೀರನ್ನು ಒದಗಿಸುವ ಎರಗೋಳು ಯೋಜನೆ ಕಾಮಗಾರಿಗೆ 2 ಅಂದಾಜು ಪಟ್ಟಿ ಮಂಜೂರಾಗಿದ್ದು ವಿವರಗಳು ಈ ಕೆಳಕಂಡಂತಿರುತ್ತವೆ.<br>a) ಮೊದಲನೇ ಹಂತದ ಕಾಮಗಾರಿಗಳು:- 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟು ಹಾಗೂ ಜಾಕ್‌ವೆಲ್ ನಿರ್ಮಿಸುವ, ಏರು ಕೊಳವೆ ಮಾರ್ಗ, ಸಂಪರ್ಕ ರಸ್ತೆ ಹಾಗೂ ಪೂರಕ ಕಾಮಗಾರಿಗಳು ಪೂರ್ಣಗೊಂಡಿದ್ದು ಕೇವಲ ಕೊನೆಹಂತದ ಕಾಮಗಾರಿ ಪ್ರಗತಿಯಲ್ಲಿರುತ್ತದೆ. ಪ್ರಸ್ತುತ ಅಣೆಕಟ್ಟಿನಲ್ಲಿ ವಿನ್ಯಾಸಿತ ಸಾಮರ್ಥ್ಯಕ್ಕೆ ನೀರನ್ನು ಶೇಖರಿಸಬಹುದಾಗಿರುತ್ತದೆ ಸೆಪ್ಟೆಂಬರ್ 2020ರ ಒಳಗೆ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಲಾಗುವುದು.<br>b) ಎರಡನೇ ಹಂತದ ಕಾಮಗಾರಿಗಳು:- (ಯು.ಐ.ಡಿ.ಎಸ್.ಎಸ್.ಎಂ.ಟಿ. ಯೋಜನೆ) ಏರು ಕೊಳವೆ ಮಾರ್ಗ, ವಿತರಣಾ ಕೊಳವೆ ಮಾರ್ಗ, ಮೇಲ್ಮಟ್ಟದ ಜಲಸಂಗ್ರಹಾಗಾರಗಳು, ಶುದ್ದೀಕರಣ ಘಟಕಗಳು ಹಾಗೂ ಪೂರಕ ಕಾಮಗಾರಿಗಳು ಶೇಕಡ 90% ರಷ್ಟು ಪೂರ್ಣಗೊಳಿಸಲಾಗಿದೆ. ಸದರಿ ಯೋಜನೆಯ ಉಳಿದ ಕಾಮಗಾರಿಗಳನ್ನು 2020-21 ರ ಆರ್ಥಿಕ ಸಾಲಿನಲ್ಲಿ ಪೂರ್ಣಗೊಳಿಸಿ ಚಾಲನೆ ಮಾಡಲು ಯೋಜಿಸಲಾಗಿದೆ. |
| ಆ) | ಈ ಯೋಜನೆ ವಿಳಂಬವಾಗಲು ಕಾರಣಗಳೇನು: | **ಈ ಯೋಜನೆ ವಿಳಂಬವಾಗಲು ಕಾರಣಗಳು ಈ ಕೆಳಗಿನಂತಿದೆ:**<br>1) ಮೊದಲನೇ ಹಂತದ ಕಾಮಗಾರಿಗಳು : 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟು ನಿರ್ಮಾಣ ಹಾಗೂ ಪೂರಕ ಕಾಮಗಾರಿಗಳು:<br>• ದಿನಾಂಕ: 30-11-2010 ರಂದು ಗುತ್ತಿಗೆದಾರರೊಂದಿಗೆ ಕರಾರು ಮಾಡಿಕೊಳ್ಳಲಾಗಿದ್ದರೂ ಸಹ, ಅರಣ್ಯ ಇಲಾಖೆ ಮತ್ತು ಕೇಂದ್ರ ಪರಿಸರ ಇಲಾಖೆಯ ಅನುಮತಿ ದೊರೆಯುವುದು ವಿಳಂಬವಾದ್ದರಿಂದ ಗುತ್ತಿಗೆದಾರರಿಗೆ ಸಂಪೂರ್ಣ ಉದ್ದೇಶಿತ ಅಣೆಕಟ್ಟು ನಿರ್ಮಾಣದ ನಿವೇಶನವನ್ನು ದಿನಾಂಕ: 21-03-2013 ರಲ್ಲಿ ಹಸ್ತಾಂತರಿಸಿದ್ದು - 28 ತಿಂಗಳ ಕಾಲ ವಿಳಂಬವಾಗಿರುತ್ತದೆ. |

- ಅಣೆಕಟ್ಟು ಅಡಿಪಾಯ ತೆಗೆಯುವ ಸಂದರ್ಭದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಗಟ್ಟಿ ಕಲ್ಲು- ಬಂಡೆಗಳು ದೊರೆತಿರುವುದರಿಂದ ಅದನ್ನು ತೆಗೆಯಲು ಆಗಿರುವ ವಿಳಂಬವಾಗಿರುತ್ತದೆ.
- ಗುತ್ತಿಗೆದಾರರ ಮಂದಗತಿಯ ಕಾರ್ಯವೂ ಸಹ ವಿಳಂಬಕ್ಕೆ ಕಾರಣವಾಗಿರುವುದರಿಂದ ಈ ವಿಳಂಬಕ್ಕೆ ಟೆಂಡರ್ ಕರಾರಿನಂತೆ ಗುತ್ತಿಗೆದಾರರಿಗೆ ರೂ. 2.15 ಕೋಟಿಗಳ ದಂಡವನ್ನು ವಿಧಿಸಲಾಗಿದೆ.
- ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿ ಸಭೆಯ ನಿರ್ಣಯದಂತೆ, ಎರಗೋಳು ಅಣೆಕಟ್ಟೆಗೆ ನೀರಿನ ಲಭ್ಯತೆ ಬಗ್ಗೆ ಮತ್ತೊಮ್ಮೆ ಅಧ್ಯಯನ ನಡೆಸಿ ಕಾಮಗಾರಿಯನ್ನು ಮುಂದುವರಿಸುವ ಬಗ್ಗೆ ವರದಿ ಮಾಡಲು ತಾಂತ್ರಿಕ ಸಮಿತಿಯನ್ನು ದಿನಾಂಕ: 01-07-2017 ರಲ್ಲಿ ಸರ್ಕಾರದ ಮಟ್ಟದಲ್ಲಿ ರಚಿಸಲಾಗಿದ್ದು, ಸಮಿತಿಯು ತನ್ನ ವರದಿಯನ್ನು ದಿನಾಂಕ: 31-08-2017 ರಲ್ಲಿ ಸರ್ಕಾರಕ್ಕೆ ಸಲ್ಲಿಸಿರುತ್ತದೆ.
- ಸಾರ್ವಜನಿಕ ಲೆಕ್ಕ ಪತ್ರಗಳ ಸಮಿತಿಯು ಕಾಮಗಾರಿಯನ್ನು ಮುಂದುವರಿಸುವ ಬಗ್ಗೆ ದಿನಾಂಕ: 18-02-2019 ರಂದು ಮಂಡಳಿಗೆ ತಿಳಿಸಿರುತ್ತಾರೆ.
- ಪ್ರಸ್ತುತ ಅಣೆಕಟ್ಟು ಕಾಮಗಾರಿಗಳು ಪೂರ್ಣಗೊಂಡಿದ್ದು ವಿನ್ಯಾಸಿತ ಸಾಮರ್ಥ್ಯದ ನೀರನ್ನು ಶೇಖರಿಸಬಹುದಾಗಿದೆ.

**2) ಎರಡನೇ ಹಂತದ ಕಾಮಗಾರಿಗಳು (ಯು.ಐ.ಡಿ.ಎಸ್.ಎಸ್.ಎಂ.ಟಿ ಕಾಮಗಾರಿಗಳು) :**

- ಮುಖ್ಯ ಏರುಕೊಳವೆ ಮಾರ್ಗವನ್ನು ಲೋಕೋಪಯೋಗಿ ಇಲಾಖೆಯ ರಸ್ತೆಯ ಮಧ್ಯ ಭಾಗದಿಂದ 10-15 ಮೀ ಅಂಚಿನಲ್ಲಿ ಅಳವಡಿಸುವ ಸಂದರ್ಭಗಳಲ್ಲಿ ಖಾಸಗಿ ಭೂಮಾಲೀಕರ ಮನವೊಲಿಸುವಲ್ಲಿ ಹಾಗೂ ಗ್ರಾಮಗಳ ಸರಹದ್ದಿನಲ್ಲಿ ಕೊಳವೆಗಳನ್ನು ಅಳವಡಿಸಲು ಸ್ಥಳೀಯರ ವಿರೋಧವಿದ್ದ ಕಾರಣ ಅವರ ಮನವೊಲಿಸಿ ಕಾಮಗಾರಿ ಕೈಗೊಳ್ಳಲು ಆಗಿರುವ ವಿಳಂಬವಾಗಿರುತ್ತದೆ.
- ರೈಲ್ವೆ ಇಲಾಖೆಯ ಸರಹದ್ದಿನಲ್ಲಿ ನಾಲ್ಕು ಸ್ಥಳಗಳಲ್ಲಿ ಕೊಳವೆ ಮಾರ್ಗ ಅಳವಡಿಸಲು ಸದರಿ ಇಲಾಖೆಯಿಂದ ಅನುಮತಿ ನೀಡುವಲ್ಲಿ ವಿಳಂಬವಾಗಿರುತ್ತದೆ.
- ಬಂಗಾರಪೇಟೆ ಪುರಸಭಾ ವ್ಯಾಪ್ತಿಯ ಪಟ್ಟಾಭಿಷೇಕ ಉದ್ಯಾನವನದಲ್ಲಿ 10 ಲಕ್ಷ. ಲೀಟರ್ ಸಾಮರ್ಥ್ಯದ ಮೇಲ್ಮಟ್ಟ ಜಲಸಂಗ್ರಹಾಗಾರ ನಿರ್ಮಾಣದ ಸಂದರ್ಭದಲ್ಲಿ ಸಾರ್ವಜನಿಕರು ನ್ಯಾಯಾಲಯದಿಂದ ತಂದಿದ್ದ ತಡೆಯಾಜ್ಞೆಯನ್ನು ತೆರವುಗೊಳಿಸಿ ಕಾಮಗಾರಿಯನ್ನು ಮತ್ತೆ ಪ್ರಾರಂಭಿಸಲು ದಿನಾಂಕ:31-07-2012ರಲ್ಲಿ ಗುತ್ತಿಗೆದಾರರಿಗೆ ನಿವೇಶನವನ್ನು ಹಸ್ತಾಂತರಿಸಲಾಗಿದೆ, ಕಾಮಗಾರಿ ಪೂರ್ಣಗೊಳಿಸುವಲ್ಲಿÀ ವಿಳಂಬವಾಗಿರುತ್ತದೆ.
- ಬಂಗಾರಪೇಟೆ ಪಟ್ಟಣದಲ್ಲಿ 13 ಎಂ.ಎಲ್.ಡಿ ಸಾಮರ್ಥ್ಯದ ಜಲಶುದ್ಧೀಕರಣ ಘಟಕವನ್ನು ನಿರ್ಮಿಸಲು ನಿವೇಶನವನ್ನು ದಿನಾಂಕ: 24-05-2015 ರಂದು ಅಂದರೆ ಕಾರ್ಯಾದೇಶ ನೀಡಿದ ದಿನಾಂಕದಿಂದ 6 ವರ್ಷ 5 ತಿಂಗಳ ವಿಳಂಬದ ನಂತರ ಸ್ಥಳೀಯ ಸಂಸ್ಥೆವತಿಯಿಂದ ಹಸ್ತಾಂತರಿಸಲಾಗಿದ್ದರಿಂದ ವಿಳಂಬವಾಗಿರುತ್ತದೆ. ತದನಂತರ ಟೆಂಡರ್ ಮೂಲಕ ಗುತ್ತಿಗೆ ನೀಡಲಾಗಿದ್ದು ಶೇ. 50% ಕಾಮಗಾರಿಯು ಪ್ರಗತಿಯಾಗಿರುತ್ತದೆ.

| | | |
|---|---|---|
| | | • ಕೋಲಾರ ನಗರದಲ್ಲಿ 4 ಸಂಖ್ಯೆ ಮೇಲ್ಮಟ್ಟ ಜಲಸಂಗ್ರಹಾಗಾರಗಳಿಗೆ ತಾಂತ್ರಿಕವಾಗಿ ಸೂಕ್ತವಾಗಿರುವ ನಿವೇಶನವನ್ನು ಭೂಸ್ವಾಧೀನ ಪ್ರಕ್ರಿಯೆ ಪೂರ್ಣಗೊಳಿಸಿ ಟೆಂಡರ್ ಅವಧಿ ಮುಗಿದ ನಂತರ ಮಂಡಳಿಗೆ ಸ್ಥಳೀಯ ಸಂಸ್ಥೆಯಿಂದ ಹಸ್ತಾಂತರಿಸಲಾಗಿರುತ್ತದೆ.<br>• ಸದರಿ ಯೋಜನೆಯಲ್ಲಿ ಗುತ್ತಿಗೆದಾರರಿಂದ ಆಗಿರುವ ವಿಳಂಬಕ್ಕೆ ರೂ. 1.56 ಕೋಟಿಗಳ ದಂಡ ವಿಧಿಸಿ, ಕಾಲವಿಸ್ತರಣೆ ನೀಡಿ ಕಾಮಗಾರಿ ಮುಂದುವರೆಸಲಾಗಿದೆ.<br>• ಪಂಪಿಂಗ್ ಮಿಷನರಿ ಕಾಮಗಾರಿಗೆ ಈಗಾಗಲೇ ಗುತ್ತಿಗೆದಾರನನ್ನು ನೇಮಿಸಲಾಗಿದೆ.<br>• ಯೋಜನೆಯಲ್ಲಿ ಮೇಲೆ ತಿಳಿಸಿರುವ ಕಾರಣಗಳಿಂದ ಕಾಮಗಾರಿಗಳ ಅನುಷ್ಠಾನದಲ್ಲಿ ವಿಳಂಬವಾಗಿರುತ್ತದೆ. ಸದರಿ ಯೋಜನೆಯನ್ನು 2020-21 ರ ಆರ್ಥಿಕ ಸಾಲಿನಲ್ಲಿ ಪೂರ್ಣಗೊಳಿಸಿ ಚಾಲನೆ ಮಾಡಲು ಯೋಜಿಸಲಾಗಿದೆ. |
| ಇ) | ಈ ಯೋಜನೆಯ ಅಂದಾಜು ವೆಚ್ಚ ಎಷ್ಟು; ಹಾಗೂ ನೈಜ ವೆಚ್ಚ ಎಷ್ಟು? (ವಿವರಗಳನ್ನು ನೀಡುವುದು) | 1) ಮೊದಲನೆ ಹಂತದ ಕಾಮಗಾರಿಗಳು : 500 ಎಂ.ಸಿ.ಎಫ್.ಟಿ ಸಾಮರ್ಥ್ಯದ ಅಣೆಕಟ್ಟು ನಿರ್ಮಾಣ ಹಾಗೂ ಪೂರಕ ಕಾಮಗಾರಿಗಳು:<br>ಅಂದಾಜು ಮೊತ್ತ - ರೂ.160.00 ಕೋಟಿಗಳು<br>ಈವರೆಗಿನ ನೈಜ ವೆಚ್ಚ - ರೂ.157.95 ಕೋಟಿಗಳು<br>ಭೂಸ್ವಾಧೀನ ವೆಚ್ಚ ಹೆಚ್ಚುವರಿ ಕಾಮಗಾರಿಗಳು ಹಾಗೂ ಇತರೆ ವೆಚ್ಚಗಳಿಂದ ಯೋಜನಾ ವೆಚ್ಚವು ಅಧಿಕವಾದ ಕಾರಣ ರೂ.186.00 ಕೋಟಿಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ.<br><br>2) ಎರಡನೇ ಹಂತದ ಕಾಮಗಾರಿಗಳು : (ಯು.ಐ.ಡಿ.ಎಸ್.ಎಸ್.ಎಂ.ಟಿ. ಯೋಜನೆ) ಏರು ಕೊಳವೆ ಮಾರ್ಗ, ವಿತರಣಾ ಕೊಳವೆ ಮಾರ್ಗ, ಮೇಲ್ಮಟ್ಟದ ಜಲಸಂಗ್ರಹಾಗಾರಗಳು, ಶುದ್ದೀಕರಣ ಘಟಕಗಳು ಹಾಗೂ ಪೂರಕ ಕಾಮಗಾರಿಗಳು:<br>ಅಂದಾಜು ಮೊತ್ತ ರೂ.79.92 ಕೋಟಿಗಳು<br>ಈವರೆಗಿನ ನೈಜ ವೆಚ್ಚ ರೂ.73.14 ಕೋಟಿಗಳು<br>ಈ ಎರಡನೇ ಹಂತದ ಯೋಜನೆಗೆ ಸಂಬಂಧಿಸಿದಂತೆ ರೂ.127.76 ಕೋಟಿಗಳ ಪರಿಷ್ಕೃತ ಅಂದಾಜು ಪಟ್ಟಿಗೆ ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಸ್ತಾವನೆಯು ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿರುತ್ತದೆ. |

ಸಂಖ್ಯೆ: ನಅಇ 119 ಯುಎಂಎಸ್ 2020